ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಸಿಡಿ\969\2016\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:16/01/2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ದೂರುದಾರರಾದ ಶ್ರೀ.ಬಿ.ಎಸ್.ನಾರಾಯಣ, #19/1, ಚಿಕ್ಕಬಾಣಸವಾಡಿ ಮುಖ್ಯ ರಸ್ತೆ, ಒಎಂಬಿಆರ್ ಬಡಾವಣೆ, ಎಂಎಸ್ ನಗರ ಅಂಚೆ, ಬೆಂಗಳೂರು-33 ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಬೆಂಗಳೂರು-33 ಎಂಎಸ್ ನಗರ ಅಂಚೆ, ಒಎಂಬಿಆರ್ ಬಡಾವಣೆ, ಚಿಕ್ಕಬಾಣಸವಾಡಿ ಮುಖ್ಯ ರಸ್ತೆ ನಂ.191/1ರ ನಿವಾಸಿಯಾದ ಶ್ರೀ.ಬಿ.ಎಸ್.ನಾರಾಯಣ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಬೆಂಗಳೂರು ನಗರ 1) ಹೆಚ್ಎಎಲ್ 2ನೇ ಹಂತದ 7ನೇ ಕ್ರಾಸ್ 10ನೇ ಮುಖ್ಯ ರಸ್ತೆಯ ಬಿಬಿಎಂಪಿ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ.ಕೆ.ಎಲ್.ವೇಣುಗೋಪಾಲ ಮತ್ತು 2) ಸದಾನಂದ ನಗರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಹಾಯಕ ಅಭಿಯಂತರರಾದ ಶ್ರೀ.ಲೋಹಿತ್ ಕೆ ಪ್ರಕಾಶ್ (ಇನ್ನು ಮುಂದೆ "1 ಮತ್ತು 2ನೇ ಎದುರುದಾರರು" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಬೆಂಗಳೂರು ನಗರ ವಾರ್ಡ್ ನಂ.79 ಮತ್ತು ಅದರ ಸುತ್ತಮುತ್ತಲ ಬಡಾವಣೆಯ ಕೊಳಚೆ ನೀರು ಕದಿರಾಯನಪಾಳ್ಯ ಒಳಚರಂಡಿಯ ನೀರನ್ನು ಪ್ರವೇಶಿಸಿ, ಸುಮಾರು ಅರ್ಧ ಕಿಲೋಮೀಟರ್ ದೂರದಿಂದಲೂ ಸಹ ಬರುತ್ತಿದ್ದು, ಆ ಕೊಳಚೆ ನೀರು ಹೋಗಲು ಪ್ರತ್ಯೇಕ ಒಳಚರಂಡಿ ವ್ಯವಸ್ಥೆಯಿದ್ದರೂ ಸಹ ಸದರಿ ಒಳಚರಂಡಿಗೆ ಬಿಟ್ಟು ತೊಂದರೆ ನೀಡಿದ್ದಾರೆ. ಈ ಬಗ್ಗೆ ಎದುರುದಾರರು ಸಹ ಸದರಿ ಕೊಳಚೆ ನೀರನ್ನು ಒಳಚರಂಡಿಯ ಮೂಲಕ ಹೋಗುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಕೆಲವು ಮನೆಯ ಮಾಲೀಕರುಗಳು ಸಹ ಕೊಳಚೆ ನೀರನ್ನು ಒಳಚರಂಡಿಯ

B.D-967/14

ಮೂಲಕ ಬಿಟ್ಟು ಅಲ್ಲಿನ ನಿವಾಸಿಗಳಿಗೆ ತೊಂದರೆ ನೀಡಿದ್ದಾರೆ. ಈ ಸಂಬಂಧವಾಗಿ, ಎದುರುದಾರರಿಗೆ, ಹಲವಾರು ಬಾರಿ ದೂರು ನೀಡಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಕದಿರೇನಹಳ್ಳಿ ಕೆರೆ ವಾರ್ಡ್ ಸಂ:79ಕ್ಕೆ ಈ ಹಿಂದೆ ಸದರಿ ವಾರ್ಡ್‌ಗೆ ಸಂಬಂಧಿಸಿದ, ಹೊಸ ಬೈಯ್ಯಪ್ಪನಹಳ್ಳಿ ಪಕ್ಕದಲ್ಲಿರುವ ಕಾಲೋನಿಯ ಕೆಲವು ಪ್ರದೇಶಗಳಿಂದ ತ್ಯಾಜ್ಯ ನೀರು ಹಳೆ ಒಳಚರಂಡಿಯ ಮಾರ್ಗ ಹಾಳಾಗಿರುವುದರಿಂದ ಹೊಸ ಬೈಯ್ಯಪ್ಪನಹಳ್ಳಿ ಪಕ್ಕದಲ್ಲಿರುವ ಡಿಫೆನ್ಸ್ ಲ್ಯಾಂಡ್‌ನಲ್ಲಿ ಹರಿಯುವ ಮಳೆ ನೀರಿನ ಒಳಚರಂಡಿಯ ಮೂಲಕ ಹರಿದು ಕದಿರೇನಹಳ್ಳಿ ಕೆರೆಗೆ ಹರಿಯುತ್ತಿದೆ. ಆದರೆ, ಇತ್ತೀಚೆಗಷ್ಟೆ ದಕ್ಷಿಣ–ಪೂರ್ವ ಎರಡು ಉಪವಿಭಾಗದ ವತಿಯಿಂದ ಹೊಸ ಬೈಯ್ಯಪ್ಪನಹಳ್ಳಿಯಲ್ಲಿ ಹೊಸದಾಗಿ 300 ಎಂಎಂ ವ್ಯಾಸದ 6 ಸಿಸಿ ಒಳಚರಂಡಿಯ ಪೈಪುಗಳನ್ನು ಅಳವಡಿಸಲಾಗಿದೆ. ಸದರಿ ಒಳಚರಂಡಿ ನೀರನ್ನು ಬೆಂಗಳೂರು ಜಲಮಂಡಳಿ ಒಳಚರಂಡಿ ಪೈಪ್‌ಗಳಲ್ಲಿ ಹರಿಯಲು ಕ್ರಮ ಕೈಗೊಳ್ಳಲಾಗಿದೆ. ಆದರೆ, ಬಂಡಪ್ಪ ಕಾಲೋನಿಯಿಂದ ಹಳೇ ಮದ್ರಾಸ್ ರಸ್ತೆಯವರೆಗೆ ಬೆಂಗಳೂರು ಜಲಮಂಡಳಿಯ ತ್ಯಾಜ್ಯ ನೀರು ನಿರ್ವಹಣೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೋರಮಂಗಲ ಮತ್ತು ಚೆಲಘಟ್ಟ ಕಣಿವೆ–1 ಉಪವಿಭಾಗದಿಂದ 450 ಎಂಎಂ ವ್ಯಾಸದ ಕೊಳವೆ ಮಾರ್ಗವು ಹಾದು ಹೋಗಿದ್ದು, ಡಿಫೆನ್ಸ್ ಲ್ಯಾಂಡ್‌ನಲ್ಲಿ 450 ಎಂಎಂ ವ್ಯಾಸದ ಕೊಳವೆ ಮಾರ್ಗವು ಹಾಳಾಗಿರುವುದು ಕಂಡು ಬಂದಿದೆ. ಈ ಬಗ್ಗೆ ಈಗಾಗಲೇ ಮೌಖಿಕವಾಗಿ ತಿಳಿಸಿದ್ದು, ಅವರ ಮೂಲಕ ಕೊಳವೆ ಮಾರ್ಗವನ್ನು ಸರಿಪಡಿಸಿ, ತ್ಯಾಜ್ಯ ನೀರನ್ನು ಕದಿರೇನಹಳ್ಳಿ ಕೆರೆಗೆ ಹರಿಯದಂತೆ ಕ್ರಮವಹಿಸಲಾಗುವುದಾಗಿ ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

N. Anand

ಲೋಉ-969/16



ಬೆಂಗಳೂರು ವಾರ್ಡ್ ನಂ.79 ಹಾಗೂ ಅದರ ಸುತ್ತಮುತ್ತಲ ಪ್ರದೇಶದ ತ್ಯಾಜ್ಯ ನೀರು, ಮಳೆ ನೀರು ಒಳಚರಂಡಿಯ ಮೂಲಕ ಹರಿದು ಕದಿರೇನಹಳ್ಳಿ ಕೆರೆಗೆ ಪ್ರವೇಶಿಸುತ್ತಿದ್ದು, ತ್ಯಾಜ್ಯ ನೀರು ಮಳೆ ನೀರಿನ ಚರಂಡಿ ಮುಖಾಂತರ ಕದಿರಾಯನ ಪಾಳ್ಯ ಕೆರೆಗೆ ಬರದಂತೆ ಮತ್ತು ಆ ಚರಂಡಿಯ ಅಕ್ಕಪಕ್ಕದ ಮನೆಗಳಿಂದ ಕೊಳಚೆ ನೀರನ್ನು ನೇರವಾಗಿ ಮಳೆ ನೀರಿನ ಚರಂಡಿಗೆ ಬಿಡದಂತೆ ನಿಲ್ಲಿಸಲು ಮತ್ತು ಸದರಿ ಕೊಳವೆ ಮಾರ್ಗಗಳನ್ನು ಶುಚಿತ್ವಗೊಳಿಸಿ, ನೀರು ಸರಾಗವಾಗಿ ಹೋಗಲು ಸೂಕ್ತ ಕ್ರಮ ಕೈಗೊಳ್ಳುವುದು ಎದುರುದಾರರ ಆದ್ಯ ಕರ್ತವ್ಯವಾಗಿದೆ.

6. ಆದ್ದರಿಂದ, ತ್ಯಾಜ್ಯ ನೀರು ಮಳೆ ನೀರಿನ ಚರಂಡಿ ಮುಖಾಂತರ ಕದಿರಾಯನ ಪಾಳ್ಯ ಕೆರೆಗೆ ಬರದಂತೆ ಮತ್ತು ಆ ಚರಂಡಿಯ ಅಕ್ಕಪಕ್ಕದ ಮನೆಗಳಿಂದ ಕೊಳಚೆ ನೀರನ್ನು ನೇರವಾಗಿ ಮಳೆ ನೀರಿನ ಚರಂಡಿಗೆ ಬಿಡದಂತೆ ನಿಲ್ಲಿಸಲು ಮತ್ತು ಸದರಿ ಕೊಳವೆ ಮಾರ್ಗಗಳನ್ನು ಶುಚಿತ್ವಗೊಳಿಸಿ, ನೀರು ಸರಾಗವಾಗಿ ಹೋಗುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 16/1

**(ನ್ಯಾಯಮೂರ್ತಿ ಎನ್ ಆನಂದ)**
**ಉಪಲೋಕಾಯುಕ್ತ-1,**
**ಕರ್ನಾಟಕ ರಾಜ್ಯ.**